459

## ಹಾಸನ ಜಿಲ್ಲಾ ದಂಡಾಧಿಕಾರಿಗಳ ನಡವಳಿಕೆಗಳು

ನಂ.ಎಂಎಜಿ 3:94-95.

ದಿನಾಂಕ:24-04-1994.

ವಿಷಯ:- ಚನ್ನರಾಯಪಟ್ಟಣ ತಾಲ್ಲೂಕ ಅನೇಕೆರೆ ಜಾತ್ರೆಗೆ ಕೋಣಗಳನ್ನು ತರದಂತೆ ನಿರ್ಬಂಧಿತ ನಿಷೇದಾಜ್ಞೆ ಹೊರಡಿಸುವ ವಿಚಾರ.

ಉಲ್ಲೇಖ:- ಹಾಸನ ಜಿಲ್ಲಾ ಆರಕ್ಷಕ ಅಧೀಕ್ಷಕರ ಪತ್ರ ಕ್ರಮಾಂಕ: ಡಿಎಸ್‌ಬಿ 13(1):94, ದಿನಾಂಕ:23-04-94.

oooooo

### ಪ್ರಸ್ತಾವನೆ:-

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕ ಅನೇಕೆರೆ ಗ್ರಾಮದಲ್ಲಿ ನಡೆಯುವ ಗ್ರಾಮ ದೇವತೆಯ ಜಾತ್ರೆಯಲ್ಲಿ ಕೋಣಗಳನ್ನು ಬಲಿ ಕೊಡುವ ಸಂಪ್ರದಾಯವಿದ್ದು, ಅದನ್ನು ತಡೆಯಲು ಕೆಲವು ಸಂಘಟನೆಗಳು ಪ್ರಯತ್ನಿಸಲಿದ್ದು, ಶಾಂತಿಗೆ ಭಂಗವುಂಟಾಗುವ ಸಂಭವವಿರುವುದಾಗಿಯೂ, ಆದುದರಿಂದ ಜಾತ್ರೆ ಪ್ರದೇಶದೊಳಕ್ಕೆ ಕೋಣ ಅಥವಾ ಎಮ್ಮೆ ಕರುಗಳನ್ನು ಹಾಗೂ ಮಾರಕಾಸ್ತ್ರಗಳನ್ನು ತರದಂತೆ ನಿಷೇದಾಜ್ಞೆ ಜಾರಿ ಮಾಡಲು ಉಲ್ಲೇಖಿತ ಪತ್ರದಲ್ಲಿ ವರದಿ ಬಂದಿರುತ್ತೆ. ಸದರಿ ವರದಿಯನ್ನು ಪರಿಶೀಲಿಸಿರುತ್ತೆ. ಶಾಂತಿಗೆ ಭಂಗವುಂಟಾಗುವ ಸಾಧ್ಯತೆ ಇರುವುದು ಮನವರಿಕೆಯಾಗಿರುತ್ತೆ.

ಜಾತ್ರೆಯ ದಿನಗಳಂದು ಈ ಪ್ರದೇಶದಲ್ಲಿ ಮದ್ಯ ಮಾರಾಟದ ನಿಷೇಧಕ್ಕೂ ಸಹ ಉಲ್ಲೇಖಿತ ವರದಿಯಲ್ಲಿ ಕೋರಲಾಗಿದೆ. ಜಾತ್ರೆಯಲ್ಲಿ ಜನ ಸಂದಣಿ ಇರುವುದರಿಂದ ಮದ್ಯ ಮಾರಾಟದ ನಿಷೇಧದ ಅವಶ್ಯಕತೆ ಇರುತ್ತದೆ. ಆದುದರಿಂದ, ಈ ಆದೇಶ ಹೊರಡಿಸಲಾಗಿದೆ.

### ಆದೇಶ

ಹಾಸನ ಜಿಲ್ಲೆಯ ಜಿಲ್ಲಾಧಿಕಾರಿ ಕೌಶಿಕ ಮುಖರ್ಜಿ, ಐ.ಎ.ಎಸ್., ಆದ ನಾನು ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 144 ರಲ್ಲಿ ದತ್ತವಾದ ಅಧಿಕಾರವನ್ನು ಉಪಯೋಗಿಸಿ ಚನ್ನರಾಯಪಟ್ಟಣ ತಾಲ್ಲೂಕ ಅನೇಕೆರೆ ಗ್ರಾಮದಲ್ಲಿ ಗ್ರಾಮದೇವತೆಯ ಜಾತ್ರೆ ನಡೆಯುವ ಪ್ರದೇಶದಲ್ಲಿ 5 ಕಿ.ಮೀ. ಸುತ್ತಳತೆ ಪ್ರದೇಶದಲ್ಲಿ ಮಾರಕವಾದ ಅಸ್ತ್ರಗಳನ್ನು ಹಿಡಿದಾಡುವುದನ್ನು ಮತ್ತು ಬಲಿಕೊಡಲು ಸಾಧ್ಯತೆ ಇರುವ ಕೋಣ ಮತ್ತು ಎಮ್ಮೆ ಕರುಗಳನ್ನು ತರುವುದನ್ನು ದಿನಾಂಕ:25-4-94ರ ಬೆಳಿಗ್ಗೆ 6-00 ಗಂಟೆಯಿಂದ ದಿನಾಂಕ:27-4-94ರ ಸಂಜೆ 6-00 ಗಂಟೆ ವರೆಗೆ ನಿಷೇಧಿಸಿ ಈ ಮೂಲಕ ಆದೇಶಿಸಿರುತ್ತೇನೆ.

ಅಲ್ಲದೆ ಅನೇಕೆರೆ ಗ್ರಾಮದಲ್ಲಿ ಗ್ರಾಮದೇವತೆಯ ಜಾತ್ರೆ ನಡೆಯುವ ಪ್ರದೇಶದ ಸುತ್ತಮುತ್ತ 5 ಕಿ.ಮೀ. ವ್ಯಾಪ್ತಿಯಲ್ಲಿ ದಿನಾಂಕ:25-4-94ರ ಬೆಳಿಗ್ಗೆ 6-00 ಗಂಟೆಯಿಂದ ದಿನಾಂಕ:27-4-94ರ ಸಂಜೆ 6-00 ಗಂಟೆವರೆಗೆ ಮದ್ಯಮಾರಾಟ ಮಾಡುವುದನ್ನು ಸಹ 1965ರ ಕರ್ನಾಟಕ ಅಬ್ಕಾರಿ ಅಧಿನಿಯಮದ 21ನೇ ಪ್ರಕರಣದ ಮೇರೆಗೆ ಈ ಮೂಲಕ ನಿಷೇಧಿಸಿರುತ್ತೇನೆ.

(ಕೌಶಿಕ ಮುಖರ್ಜಿ),
ಜಿಲ್ಲಾ ದಂಡಾಧಿಕಾರಿಗಳು, ಹಾಸನ ಜಿಲ್ಲೆ.

1) ಆರಕ್ಷಕ ಅಧೀಕ್ಷಕರು, ಹಾಸನ.
2) ಡಿ.ವೈ.ಎಸ್.ಪಿ, ಅರಸೀಕೆರೆ.